ಸಂಪಾದಕೀಯ



# ಕೃಪೆಯೆಂಬ ಕಡಲು

ಆಧ್ಯಾತ್ಮಿಕ ಜಗತ್ತಿನಲ್ಲಿ ಭಗವಂತನ ಕೃಪೆಯ ಸಂಬಂಧವಾಗಿ ನಾವು ಹಲವು ಮಾತುಗಳನ್ನು ಕೇಳುತ್ತೇವೆ. ಇಹಲೋಕದ ಯಾವ ತರ್ಕಗಳೂ, ಯಾವ ನಿಯಮಗಳೂ ಕೃಪೆಯ ಮುಂದೆ ನಿಲ್ಲುವುದಿಲ್ಲ. ಮಾನವನ ಜೀವನದ ಬಗ್ಗೆ ನಾವು ಎಷ್ಟೇ ಲೆಕ್ಕಚಾರಗಳನ್ನು ಹಾಕಿಕೊಂಡರೂ, ಈ ಒಂದು ತತ್ತ್ವದ ಮುಂದೆ ಅವೆಲ್ಲ ಸೋತು ಸುಣ್ಣವಾಗಬೇಕು. ಮನುಷ್ಯ ಎಲ್ಲ ಬೇರೆ ಪ್ರಯತ್ನಗಳನ್ನೂ ಮಾಡುತ್ತಾನೆ; ಎಲ್ಲವೂ ವಿಫಲವಾಗಿ, ಅಸಹಾಯಕನಾಗಿ ನಿಂತಾಗ ಅವನಿಗೆ ನೆನಪಾಗುವುದೊಂದೇ — ತಾನು ನಂಬಿದ ದೈವ ನನ್ನ ಕೈಬಿಡಲಾರದು, ಆರ್ತನಾದದಿಂದ ಮೊರೆಯಿಟ್ಟಾಗ ಆ ಭಗವಂತ ಬಂದೇ ಬರುತ್ತಾನೆ; ನನ್ನ ರಕ್ಷಣೆ ಮಾಡುತ್ತಾನೆ. ಹಿಂದೂ ಸಂಸ್ಕೃತಿಯ ಬಹುತೇಕ ಎಲ್ಲ ಪಂಥಗಳಲ್ಲೂ ಪ್ರಾರ್ಥನೆ, ಭಕ್ತಿ, ಕೃಪೆ ಇವುಗಳಿಗೆ ಮಹತ್ವದ ಸ್ಥಾನವಿದೆ. ದೇವರ ಕೃಪೆಯಿಂದ ಹೇಗೋ ಇದ್ದವನು ಪರಮಭಕ್ತನಾಗುತ್ತಾನೆ, ಕಾಲಿಲ್ಲದವನೂ ಪರ್ವತವೇರುತ್ತಾನೆ, ಮೂಕನಾದವನೂ ಮಾತನಾಡುತ್ತಾನೆ. ಸರ್ವಶಕ್ತನಾದ, ಸರ್ವಾತ್ಮಕನಾದ ಭಗವಂತನಿಗೆ ಅಸಾಧ್ಯವಾದುದು ಯಾವುದು? ಈ ಹಿನ್ನೆಲೆಯಲ್ಲಿ ಕೃಪೆಯೆಂಬುದು ಒಂದು ಮಹಾಶಕ್ತಿ ; ಅದೇ ಮಹಾ ತತ್ತ್ವ; ಹಾಗೂ ಭಕ್ತನಿಗೆ ಎಲ್ಲಕ್ಕಿಂತಲೂ ಹೆಚ್ಚಿನದಾದ ಭರವಸೆ, ಆಶ್ರಯಸ್ಥಾನ.

### ಕೃಪೆ : ನಿಯಮಗಳನ್ನು ಮೀರಿದ್ದು

ಭಗವಂತನ ಕೃಪೆಗೆ ಸಂಬಂಧಪಟ್ಟ ಹಲವು ಕಥೆಗಳನ್ನು ಅವಲೋಕಿಸಿದಾಗ, ಹಾಗೂ ಮಹಾತ್ಮರುಗಳು ಕೃಪೆಗೆ ಸಂಬಂಧಪಟ್ಟಂತೆ ಹೇಳಿದ ಮಾತುಗಳನ್ನು ಕೇಳಿದಾಗ ನಮಗೆ ತಿಳಿದು ಬರುವ ಸಂಗತಿಯಿದು: ಭಗವಂತನ ಕೃಪೆ ಎಲ್ಲ ನಿಯಮಗಳನ್ನೂ ಮೀರಿ ನಿಂತಿದೆ. ಈ ಸಂಬಂಧವಾಗಿ ಶ್ರೀರಾಮಕೃಷ್ಣರಿಗೂ ಅವರ ಪೋಷಕ ಭಕ್ತನಾಗಿದ್ದ ಮಥುರನಾಥನಿಗೂ ನಡೆದ ಸಂಭಾಷಣೆ ಅತ್ಯಂತ ಕುತೂಹಲಕಾರಿಯಾಗಿದೆ.

ಒಂದು ಸಲ ಮಥುರನು ಶ್ರೀರಾಮಕೃಷ್ಣರಿಗೆ ಹೇಳಿದ, ''ಭಗವಂತನೂ ನಿಯಮಕ್ಕೆ ಅನುಸಾರವಾಗಿ ನಡೆಯಬೇಕು. ಅವನಿಗೆ ತಾನೇ ಮಾಡಿದ ನಿಯಮವನ್ನು ರದ್ದುಗೊಳಿಸುವ ಸಾಮರ್ಥ್ಯವಿಲ್ಲ.'' ಅದಕ್ಕೆ ಶ್ರೀರಾಮಕೃಷ್ಣರು ಹೇಳಿದರು, ''ಇದೇನಯ್ಯ ನೀನು ಹೇಳುವುದು? ಯಾರು ನಿಂತು ನಿಯಮವನ್ನು ಮಾಡಿರುವನೋ, ಅವನೇ ಅದನ್ನು ರದ್ದುಗೊಳಿಸಲಾರನೇನು, ಅಥವಾ ಆ ಜಾಗದಲ್ಲಿ ಇನ್ನೊಂದು ನಿಯಮವನ್ನು ಜಾರಿಗೊಳಿಸಲಾರನೇನು?'' ಅವರ ಮಾತನ್ನು ಒಪ್ಪದ ಮಥುರನಾಥ ಹೇಳಿದ, ''ಕೆಂಪು ಹೂವಿನ ಗಿಡ ಕೆಂಪು ಹೂವನ್ನೇ ಬಿಡುತ್ತದೆ, ಬಿಳಿ ಹೂವನ್ನು ಬಿಡಲಾರದು.'' ಶ್ರೀರಾಮಕೃಷ್ಣರನ್ನು ''ಭಗವಂತ ಇಚ್ಛಿಸಿದರೆ ಇದನ್ನೂ ಮಾಡಬಲ್ಲ'' ಎಂದರು. ಮರುದಿನ ಶ್ರೀರಾಮಕೃಷ್ಣರು ಶೌಚಕ್ಕೆ ಹೋಗಿದ್ದಾಗ ನೋಡಿದರು, ಒಂದು ಕೆಂಪು ದಾಸವಾಳದ ಗಿಡದ ಒಂದೇ ಗೆಲ್ಲಿನಲ್ಲಿ ಎರಡು ಬಣ್ಣದ ಹೂಗಳಿದ್ದವು – ಒಂದು ಕೆಂಪು, ಇನ್ನೊಂದು ಬಿಳಿ. ಕೂಡಲೇ ಆ ಗೆಲ್ಲನ್ನು ಕಿತ್ತು ತಂದು ಮಥುರನಿಗೆ ತೋರಿಸಿದರು ಶ್ರೀರಾಮಕೃಷ್ಣರು. ಆಗ ಮಥುರ ಹೇಳಿದ, ''ಹೌದು, ನಾನು ಸೋತೆ.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೧, ಪು. ೪೮೬)*

ಭಗವಂತನ ಇಚ್ಛೆಯೇ ಎಲ್ಲ ನಿಯಮಗಳನ್ನೂ ನಿಯಂತ್ರಿಸುವುದು. ಕಾರಣ, ಎಲ್ಲ ನಿಯಮಗಳನ್ನೂ ಅವನೇ ಮಾಡಿದವನು. ಇಚ್ಛೆಪಟ್ಟರೆ ಅವನು ಎಲ್ಲ ನಿಯಮಗಳನ್ನೂ ಮೀರಿ ಹೋಗಬಲ್ಲ; ತನ್ನಿಚ್ಛೆಯಂತೆ ವರ್ತಿಸಬಲ್ಲ. ಭಗವಂತನ ಕೃಪೆಯ ವಿಷಯದಲ್ಲೂ ಇದೇ ತತ್ತ್ವ ಅನ್ವಯವಾಗುವುದು. ಜನರು, 'ಎಲ್ಲವೂ ನನ್ನ ಕರ್ಮ, ನನ್ನ ಪ್ರಾರಬ್ಧ, ನನ್ನ ಹಣೆ ಬರಹ' ಎಂದು ಪ್ರತಿಯೊಂದು ಅನರ್ಥ, ಗಂಡಾಂತರ, ಸೋಲು, ನಷ್ಟಗಳನ್ನು ವಿಧಿನಿಯಮದ ಹೆಗಲಿಗೇರಿಸುತ್ತಾರೆ. ಕರ್ಮನಿಯಮದ ಪ್ರಕಾರ ಎಲ್ಲದಕ್ಕೂ ತಾನೇ ಹೊಣೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಸೋತವನಿಗೆ, ಬಿದ್ದವನಿಗೆ, ದುಃಖಿತನಿಗೆ ಮೇಲೆದ್ದು ನಿಲ್ಲಲು ಉತ್ಸಾಹ, ಭರವಸೆ ತುಂಬಬಲ್ಲ ಒಂದು ಅಗೋಚರ ಶಕ್ತಿ ತನ್ನ ಮುಂದಿದೆ, ಭಗವಂತನ ರೂಪದಲ್ಲಿ ರಕ್ಷಿಸಲು ಸದಾ ಸಿದ್ಧವಿದೆ ಎಂಬುದನ್ನು ಅವನು ನಂಬಬೇಡವೆ?